

ಕಂಪನಿಗಳು ಈ ಉತ್ಪನ್ನವನ್ನು ಸರ್ವಕಾಲಕ್ಕೂ ಸೈ ಅನ್ನುವಂತೆ ಉತ್ಪಾದಿಸುತ್ತಿವೆ. ಇದರಿಂದ ಫ್ಯಾಷನ್ ಜಗತ್ತಿನ ಪೈಪೋಟಿಯಲ್ಲಿ ಎಲ್ಲ ಕಾಲಕ್ಕೂ ಸಲ್ಲುವಂತೆ ತನ್ನ ನಾವೀನ್ಯ ರೂಪವನ್ನು ಈ ಜಾಕೆಟ್ ಪಡೆಯುತ್ತಿದೆ.

## ಬಹುಮುಖಿಯ ಮೆರುಗು

ಮಳೆಗಾಲ ಮತ್ತು ಚಳಿಗಾಲ ಎರಡಕ್ಕೂ ಈ ಮೇಲುಡುಗೆ ಸೂಕ್ತ. ಹಾಗೆಂದು ಬೇಸಿಗೆಗೆ ಇದನ್ನು ದೂರಿ ದೂರ ದೂಡುವ ಮಾತೇ ಇಲ್ಲ. ಬಾಂಬರ್ ಜಾಕೆಟ್ ಬಹೂಪಯೋಗಿ ಗುಣ ಹೊಂದಿದೆ. ಇದರಲ್ಲಿ ಮಳೆಗಾಲಕ್ಕೆ ಸೂಕ್ತವಾಗುವ ಮೆಟೀರಿಯಲ್ ಬಳಸಿದಂತೆ, ಚಳಿಗಾಲದಲ್ಲಿ ಹಾಕಿಕೊಂಡು ಮಲಗಲೂ ಅನುಕೂಲ ಆಗುವಂತೆಯೂ ಮಾಡುತ್ತಾರೆ. ಮಳೆಗೆ ರೈನ್ ಕೋಟಿನಂತೆಯೂ ತನ್ನ ಪಾತ್ರ ನಿರ್ವಹಿಸಬಲ್ಲದು. ಮಲಗುವ ಸಮಯದಲ್ಲಿ ಸ್ವೆಟರ್‌ನಂತೆಯೂ ಆಗುತ್ತದೆ. ಬೇಸಿಗೆಯಲ್ಲಿ ಬಿಸಿಲ ಧಗೆ ದೇಹವನ್ನು ಸೋಂಕದಂತೆ ತಡೆಯಬಲ್ಲದು. ಒಟ್ಟಾರೆ ನಿರಂತರ ಬದಲಾವಣೆ ಬಯಸುವ ಫ್ಯಾಷನ್ ಲೋಕಕ್ಕೆ ತಕ್ಕಂತೆ ಜಾಕೆಟ್ ಹೊಸ ಹೊಸ ಬಗೆಯಲ್ಲಿ ಅವತರಿಸುತ್ತಿದೆ. ವರ್ಷ ಕಳೆದಂತೆ ಟ್ರೆಂಡ್ ಬದಲಾದಂತೆ, ಕಾಲಕ್ಕೆ ತಕ್ಕಂತೆ ಸ್ಟೈಲ್‌ನಲ್ಲಿಯೂ ಬದಲಾವಣೆ ಹೊಂದುತ್ತಲೇ ವಿಕಾಸವನ್ನು ಕಾಣುತ್ತಿದೆ ಈ ಜಾಕೆಟ್.

ಇದೊಂಥರ ಬೆಚ್ಚಗಿನ ಅಂಗಿ, ದ್ವಿಲಿಂಗಿ ಗುಣ ಹೊಂದಿದೆ. ಮಹಿಳೆಯರಿಗೂ–ಪುರುಷರಿಗೆ, ಒಂದು ಕಡೆ ಫ್ಯಾಷನ್ ಮತ್ತೊಂದು ಕಡೆ ಹವಾಮಾನದ ವೈಪರೀತ್ಯವನ್ನು ನಿಯಂತ್ರಿಸುವ ವಿಶೇಷ ಗುಣ ಈ ಜಾಕೆಟಿನದು. ಸಾಮಾನ್ಯವಾಗಿ ಚಳಿಗಾಲದಲ್ಲಿ ಬೆಚ್ಚನೆ ಉಡುಪು ಎಲ್ಲರಿಗೂ ಇಷ್ಟ ಆಗುತ್ತದೆ. ಆಗ ಹೆಚ್ಚಾಗಿ ಜೀನ್ಸ್‌ಗೆ ಮೊರೆಹೋಗುತ್ತಾರೆ. ಜೀನ್ಸ್ ಪ್ಯಾಂಟ್‌ಗೂ ಫಾರ್ಮಲ್ ಡ್ರೆಸ್‌ಗೂ ಹೊಂದಿಕೆ ಆಗುತ್ತದೆ ಬಾಂಬರ್. ಡೆನಿಮ್, ನೈಲಾನ್, ಫ್ಯಾಬ್ರಿಕ್, ಕಾಟನ್, ಸಿಲ್ಕ್, ಲೆದರ್‌ನ ಜಾಕೆಟ್‌ಗಳೂ ಸಿಗುತ್ತವೆ. ಈ ಜಾಕೆಟ್‌ನ ಮತ್ತೊಂದು ವಿಶೇಷ ಏನೆಂದರೆ, ಟೀ ಶರ್ಟ್–ಅಂಗಿ ಮೇಲೆ ತೊಡಲು ಅಡ್ಡಿಯಿಲ್ಲ. ಮಹಿಳೆಯರ ಸ್ಕರ್ಟ್‌ಗೂ ಚೂಡಿಗೂ



ಸೂಟಾಗುತ್ತದೆ. ವಯೋಮಾನದಲ್ಲಿಯೂ ಇದಕ್ಕೆ ಬಿಗುಮಾನವಿಲ್ಲ. ಪೋರರಿಂದ ಬಾಗಿ ಬಳುಕುವ ಹಿರಿ ಜೀವಕ್ಕೂ ಇದು ಬೆಂಡಾಗಿ ಹಿತವನ್ನು ನೀಡುತ್ತದೆ. ಹಾಗಾಗಿ ಅಬಾಲ ವೃದ್ಧರಿಗೂ ಸೈ ಅನ್ನಿಸಿಕೊಳ್ಳುವ ಮಳೆ–ಚಳಿ–ಬಿಸಿಲ ಕಾಲದ ಸಂಗಾತಿ ಜಾಕೆಟ್‌ಗೆ ಜೈ ಅನ್ನುವವರೇ ಎಲ್ಲ. ಆಧುನಿಕ ಜೀವನಶೈಲಿಗೆ ತಕ್ಕುದಾಗಿ ಮಾರ್ಪಾಡು ಹೊಂದುವ ಫ್ಯಾಷನ್, ಸ್ಟೈಲಿಗೂ ಕೈ ಜೋಡಿಸುವುದರಿಂದ ಮತ್ತೊಂದು ಇರಲಿ ಎನ್ನುವ ಆಸೆ ಹುಟ್ಟಿಸುತ್ತದೆ.

## ಬಣ್ಣ ಬಿನ್ನಾಣಕ್ಕೇನೂ ಕಮ್ಮಿ ಇಲ್ಲ

ಹಲವು ಪ್ಯಾಟರ್ನ್, ಬಣ್ಣಗಳಲ್ಲೂ ವೈವಿಧ್ಯತೆಯ ಸೊಗಸು ಬಾಂಬರ್ ಜಾಕೆಟಿಗೆ ಇದೆ. ಶರ್ಟ್ ಟೀ ಶರ್ಟ್‌ನಂತೆಯೇ ಬೇರೆ ಬೇರೆ ಬಣ್ಣ ಮತ್ತು ವಿನ್ಯಾಸಗಳಲ್ಲಿ ಸಿಗುತ್ತದೆ. ಸಿಂಪಲ್ ಆಗಿ ಕಾಣಬಯಸುವ ಮನಸುಗಳಿಗೂ ರಗಡ್ ಆಗಿ ಕಾಣಿಸಬೇಕು ಎನ್ನುವ ಚೇತೋಹಾರಿಗಳಿಗೂ ಮೆಚ್ಚುಗೆ ಆಗುವ ಬಗೆಯಲ್ಲೇ ಬಾಂಬರ್ ಜಾಕೆಟ್ ಸಿಗುತ್ತವೆ. ಈ ಜಾಕೆಟ್‌ಗೆ ಸ್ಫೂರ್ತಿ ಸಿಕ್ಕಿದ್ದೆ ಸೇನೆಯ ಕಾರಣಕ್ಕೋ ಏನೋ, ಫ್ಯಾಷನ್ ಜಗತ್ತು ಕೆಲವನ್ನು ಮಿಲಿಟರಿ ಸಮವಸ್ತ್ರದ ಶೈಲಿಯಲ್ಲೇ ವಿನ್ಯಾಸ ಮಾಡುತ್ತದೆ. ಆ ಮೂಲಕ ಅದರ ಮೂಲ ಕುರುಹನ್ನು ಇಂದಿಗೂ ಉಳಿಸಿಕೊಂಡಿದೆ. ಸೈನಿಕರ ಸಮವಸ್ತ್ರದ ವೈಶಿಷ್ಟ್ಯಕ್ಕೆ ಸಮವಾಗುವಂತೆ ಅಲ್ಲಲ್ಲಿ ಪ್ಯಾಚ್ ಮತ್ತು ಜೇಬುಗಳನ್ನು ವಿನ್ಯಾಸ ಮಾಡಿರುತ್ತಾರೆ. ಆ ಮೂಲಕ ಅದು ತನ್ನ ಗತಕಾಲದ ವೈಭವವನ್ನು ಸ್ಮರಿಸುತ್ತಾ ನವಯುಗದ ತರುಣ–ತರುಣಿಯರ ಮನದಿಂಗಿತವನ್ನೂ ಈಡೇರಿಸುತ್ತಿದೆ. ಎಲ್ಲ ಕಾಲಕ್ಕೂ ಸೂಕ್ತವಾಗುವ ಸ್ಟೈಲ್ ಇದಕ್ಕಿದೆ. ಹಗುರ, ಮೃದು, ಅದ್ದೂರಿಯ ನೋಟ ಮತ್ತು ಸ್ಪರ್ಶಕ್ಕೆ ಇದು ದಕ್ಕುತ್ತಿದೆ. ಪಾರ್ಟಿ ಸೇರಿದಂತೆ ಸ್ನೇಹಮಿಲನ ಕಾರ್ಯಕ್ರಮಗಳಲ್ಲಿ ಇದನ್ನು ಧರಿಸಿ ಮಿಂಚಬಹುದು ಎನ್ನುತ್ತಾರೆ ಜಾಕೆಟ್ ವಿನ್ಯಾಸಕರು.

ಶತಮಾನ ಕಳೆದರೂ ಬಾಂಬರ್ ಜಾಕೆಟ್ ತನ್ನ ಬೇಡಿಕೆಯನ್ನು ಇನ್ನೂ ಉಳಿಸಿಕೊಂಡಿದೆ. ಕಾರಣ ಅದರ ನಾವೀನ್ಯ ಸಹಜ ಆದರೂ ದೀರ್ಘ ಕಾಲದ ಬಾಳಿಕೆಯ ಆಯುಷ್ಯ, ಚಳಿ, ಮಳೆ, ಬಿಸಿಲಿ ಹವಾಮಾನ ವೈಪರೀತ್ಯ ನಿರೋಧಕ, ಆರ್ಥಿಕವಾಗಿಯೂ ಜೇಬಿಗೆ ಅಷ್ಟು ಭಾರ ಅಲ್ಲದಿದ್ದರೂ ಸೂಟಿನಂತೆಯ ರಗಡ್ ಮಿಂಚುವುದು ಅಪಾರ ಜನರ ಪ್ರೀತಿಗೆ ಪಾತ್ರವಾಗಿದೆ. ಸ್ಟೈಲಿಷ್ ಆಗಿ ಕಾಣುವುದು ಕೂಡ ಇದರ ಅನುಗಾಲದ ಆಕರ್ಷಣೆಯಾಗಿಯೇ ಉಳಿದೆ. ವರ್ಷವಿಡೀ ಬೇರೆ ಬೇರೆ ಕಾರಣಗಳಿಗೆ ಉಡಬಹುದಾದ ಸ್ಟೈಲಿಷ್ ಟ್ರೆಂಡ್ ಹೇಳುವುದೇನೆಂದರೆ ಆರಾಮದಾಯಕ, ಸೊಗಸಿನ ಮೆರುಗು ನೀಡುವ ಜೊತೆಗೆ ಅದ್ದೂರಿತನವನ್ನು ಬಾಂಬರ್ ಜಾಕೆಟ್ ತುಂಬುತ್ತದೆ. ■